# ಲಂಬಾಣಿ ರಾಮಾಯಣದಲ್ಲಿ ಸೀತಾರಾಮ ಕಲ್ಯಾಣ

**ಸೋಮಶೇಖರ ಎಂ.**

ಕನ್ನಡ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೋಕ. ಬಳ್ಳಾರಿ.

**DOI: https://doi.org/10.5281/zenodo.18116580**

## ABSTRACT:

ಲಂಬಾಣಿಗರು ತಮ್ಮ ಗೋರಬೋಲಿ (ಲಂಬಾಣಿ ಭಾಷೆ)ಯಲ್ಲಿ ಮೌಖಿಕ 'ರಾಮಾಯಣ'ವನ್ನು ಕಟ್ಟಿಕೊಂಡಿರುವುದು ವಿಶೇಷವಾಗಿದೆ. ಜೈನರಾಮಾಯಣ, ಗೊಂಡರಾಮಾಯಣ, ಬೌದ್ಧರಾಮಾಯಣ ಹೀಗೆ ಮೊದಲಾದ ರಾಮಾಯಣಗಳ ಸಾಲಿನಲ್ಲಿ ವಿಶೇಷವಾಗಿ ಕಾಣಿಸಿಕೊಳ್ಳುವ ಲಂಬಾಣಿ ರಾಮಾಯಣವು ಜನಪದ ಹಾಡಿನ (ಜನಪದ ಕಥನಗೀತೆ) ರೂಪದಲ್ಲಿದೆ. ಲಂಬಾಣಿಗರು ತಮ್ಮ ವಿರಾಮದ ವೇಳೆಯಲ್ಲಿ, ಮದುವೆ ಸಂಭ್ರಮದಲ್ಲಿ, ಸೂತಕದ ಮನೆಯಲ್ಲಿ, ಹಬ್ಬಹರಿದಿನಗಳಲ್ಲಿ ಭಜನೆ (ವಾಝು) ಮಾಡುವ ಪರಂಪರೆಯಿದೆ. ಇಂಥ ಸಂದರ್ಭದಲ್ಲಿ ತಮ್ಮ ಸ್ಮೃತಿಪಟಲದಲ್ಲಿ ಹುದುಗಿದ್ದ ಕಾವ್ಯ-ಪುರಾಣಗಳ ಕಥೆಗಳನ್ನು ಪಠಿಸುವ ಪರಿಪಾಠವಿದೆ. ಪುರಾಣ ಪ್ರವಚನಗಳಂತೆ ಕಾಣಿಸಿಕೊಳ್ಳುವ ಈ ವಿಶಿಷ್ಟ ಪದ್ಧತಿಯು ಲಂಬಾಣಿಗರ ಪ್ರಮುಖ ಮನೋರಂಜನಾ ಕಾರ್ಯಕ್ರಮ. ಇಂಥ ಕಾರ್ಯಕ್ರಮಗಳಲ್ಲಿ ವಾಚಿಸುವ ರಾಮಾಯಣದ ಸೀತೆ, ರಾಮ ಹಾಗೂ ವಿವಿಧ ಪಾತ್ರಗಳ ಕುರಿತಾದ ಕಥೆಗಳು ಅಸಂಖ್ಯಾತವಾಗಿವೆ. ಅವುಗಳಲ್ಲಿ ಲಂಬಾಣಿ ಜನಪದರಲ್ಲಿ ಮಹತ್ವ ಪಡೆದ ಸೀತಾರಾಮ ಕಲ್ಯಾಣದ ಕುರಿತಾದ ಕಥಾವಸ್ತುವಿನ ವಿಶೇಷತೆಯನ್ನು ಪ್ರಸ್ತುತ ಲೇಖನ ಒಳಗೊಂಡಿದೆ.

## KEYWORDS:

ಲಂಬಾಣಿ ರಾಮಾಯಣ, ಸೀತಾರಾಮ ಕಲ್ಯಾಣ, ಲಂಬಾಣಿ ಜನಪದ ಸಾಹಿತ್ಯ, ಗೋರಬೋಲಿ, ಸೀತೆಯ ಸ್ವಯಂವರ.

## ಪ್ರಸ್ತಾವನೆ:

ವಾಲ್ಮೀಕಿ ಮಹರ್ಷಿಗಳಿಂದ ರಚಿತವಾದ ಸಂಸ್ಕೃತ 'ರಾಮಾಯಣ' ದೇಶದ ಎಲ್ಲ ಭಾಷೆಗಳ ಸಮುದಾಯಕ್ಕೆ ಮೌಲಿಕ ಮಾಧ್ಯಮ. ಇದು ಕೇವಲ ಮನೋರಂಜನೆಗೆ ಸೀಮಿತವಾದ ಕಾವ್ಯವಲ್ಲ. ಒಂದು ಜನಾಂಗದ ಸಂಸ್ಕೃತಿ, ನಂಬಿಕೆ, ಸಂಪ್ರದಾಯ, ವ್ಯವಹಾರ, ಮುಂತಾದ ಮೌಲ್ಯಗಳ ಕಣಜ. ರಾಮಾಯಣವನ್ನು ಓದುವ ಮತ್ತು ಕೇಳುವ ಜನರಿಗೆ ಬದುಕನ್ನು ಕಟ್ಟಿಕೊಳ್ಳಲಿಕ್ಕೆ ಮೌಲ್ಯಯುತವಾದ ಸಲಹೆ, ಮಾರ್ಗದರ್ಶನ ಪ್ರಾಪ್ತಿಯಾಗುವುದು. ಈ ಮಹಾಕಾವ್ಯವು ಮನುಜಮತದ ಸಮನ್ವಯತೆಯ 'ದರ್ಶನ' ಮಾಡಿಕೊಡುತ್ತದೆ. ವಾಲ್ಮೀಕಿ ರಾಮಾಯಣವು ದೇಶದ ಅಖಂಡತೆಯನ್ನು ಸಾರುವಂಥದ್ದಾಗಿದೆ. ಇದರ ನೆರಳಲ್ಲೇ ಹಲವು ಬುಡಕಟ್ಟು ರಾಮಾಯಣಗಳು ಹುಟ್ಟಿ ಬೆಳೆದವು. ಅಂಥವುಗಳಲ್ಲಿ ಲಂಬಾಣಿ ರಾಮಾಯಣವು ಒಂದಾಗಿದೆ.

ರಾಮಾಯಣದ ಪಾತ್ರಗಳು ಭಾರತೀಯ ಸಾಂಸ್ಕೃತಿಕ ಮೌಲ್ಯಗಳು ಎಂದು ಪರಿಗಣಿಸಲ್ಪಟ್ಟಿವೆ. ಅವುಗಳಲ್ಲಿ ರಾಮ ಮತ್ತು ಸೀತೆಯ ಪಾತ್ರ ಪ್ರಮುಖವಾಗಿದೆ. ರಾಮಾಯಣದಲ್ಲಿ ಸೀತೆಯ ಪಾತ್ರ ಹಲವು ಏಳುಬೀಳುಗಳಿಗೆ ಕಾರಣವಾಗಿದೆ. ಜನಪದರಲ್ಲಿ ಸೀತೆಯು ಸಾಕ್ಷಾತ್ ದೇವತೆಯಾದರೆ, ರಾಮನೂ ದೈವಪುರುಷನೇ. ಸಾಂಸ್ಕೃತಿಕ ಪ್ರತಿನಿಧಿಯಾದ ಒಬ್ಬ ವ್ಯಕ್ತಿಯನ್ನು ದೈವವನ್ನಾಗಿಸುವ ಯೋಚನೆಗಳು ಮಾನವನಲ್ಲಿ ತಲೆತಲಾಂತರದಿಂದಲೂ ಸಾಗಿಬಂದಿರುವ ಪರಂಪರೆ. ಲಂಬಾಣಿ ರಾಮಾಯಣವನ್ನು ಕಟ್ಟಿದ ಜನಪದರು ತಮ್ಮ ಆರಾಧ್ಯನಾಗಿರುವ ರಾಮನೊಂದಿಗೆ ಸೀತೆಯ ಕಲ್ಯಾಣ ಮಾಡಿಸುವ ವಿಧಾನವನ್ನು ವಿಶೇಷವಾಗಿ ಚಿತ್ರಿಸಿದ್ದಾರೆ. ಸೀತೆಯ ಹುಟ್ಟು, ಬಾಲ್ಯ, ಯೌವನದ ವರ್ಣನೆಯು ಸಾಧಾರಣವಾಗಿ ಕಂಡರೂ; ಸೀತೆಯ ಮದುವೆಯ ಪ್ರಸಂಗವು ಅದ್ಭುತವಾಗಿ ವರ್ಣಿಸಲ್ಪಟ್ಟಿದೆ.

**ಸೀತೆಯ ಹುಟ್ಟು ಮತ್ತು ಬಾಲ್ಯ:**

ಲಂಬಾಣಿ 'ರಾಮಾಯಣ'ದಲ್ಲಿ ಚಿತ್ರಿತವಾಗಿರುವ ಸೀತಾರಾಮ ಕಲ್ಯಾಣದ ಕುರಿತು ಇಲ್ಲಿ ಚರ್ಚಿಸುವ ಪೂರ್ವದಲ್ಲಿ ಸೀತೆಯ ಹುಟ್ಟು, ಬಾಲ್ಯವನ್ನು ಮಿತವಾಗಿ ಚರ್ಚಿಸುವುದು ಸೂಕ್ತವಿದೆ. ಸೀತೆಯ ಜನ್ಮದ ಕುರಿತಾದ ಚರ್ಚೆಗಳು, ದಂತಕಥೆಗಳು ಹಲವಿವೆ. ಅವುಗಳ ಚರ್ಚೆ ಇಲ್ಲಿ ಅನಾವಶ್ಯಕ. ಲಂಬಾಣಿಗರು ಸೀತೆಯ ಹುಟ್ಟಿನ ಬಗೆಗೆ ಕಟ್ಟಿಕೊಂಡಿರುವ ಕಥೆಯನ್ನು ವಿವರಿಸುವ ಪ್ರಯತ್ನ ಇಲ್ಲಿದೆ.

ಸೀತೆ ಜನಕ ಮಹಾರಾಜನ ಹೊಟ್ಟೆಯಲ್ಲಿ ಹುಟ್ಟಿದ ಮಗಳಲ್ಲ. ಸಾಕು ಮಗಳು. ಮಿಥಿಲಾ ನಗರದ ಹತ್ತಿರದ ನದಿಯಲ್ಲಿ ಮೀನು ಹಿಡಿಯುತ್ತಿರುವಾಗ ಮೀನಿನ ಬಲೆಗೆ ಒಂದು ಪೆಟ್ಟಿಗೆ ಸಿಕ್ಕಿತಂತೆ, ಆ ಪೆಟ್ಟಿಗೆಯಲ್ಲಿ ಒಂದು ಹೆಣ್ಣು ಮಗು ಇತ್ತಂತೆ. ಇದನ್ನು ಲಂಬಾಣಿ ಜನಪದರು ಕಟ್ಟಿಕೊಡುವ ಕಥೆಯ ಹಿನ್ನೆಲೆ ಹೀಗಿದೆ:

**ನಂದಿಮಾಯಿ ಝಿ ಮರ್ಯಾ ಜಾಳ ಘಾಲೇಚರೆ**
**ಜಾಳೇನ ಪಾಂಚ ಝಿ ಮರ್ಯಾ ಖೇಚಲೀದೇಚರೆ**
**ಓಯಿ ಜಾಳೇಮ ಸಂದ್ಕಾ ಡಗರಿ ಆವರೆ**
**ಓಯಿ ಸಂದ್ಕಾಮ ನಾನಕ್ಯಾಸೊ ಬಾಳಾ ವಿಯರೆ**
**ಪಾಂಚಿ ಝಿಮರ್ಯಾಮ ಏಕ ವಾಂಜವಾ ವಿಯರೆ**

**(ಲಂಬಾಣಿ ರಾಮಾಯಣ, ಪುಟ:91)**

(ಅರ್ಥ: ನದಿಯಲ್ಲಿ ಮೀನುಗಾರರು ಬಲೆ ಹಾಕಿದರು, ಬಲೆಯನ್ನು ಐದು ಜನ ಮೀನುಗಾರರು ಎಳೆದರು, ಆ ಬಲೆಯ ಜೊತೆಗೆ ಪೆಟ್ಟಿಗೆಯು ಬಂತು, ಆ ಪೆಟ್ಟಿಗೆಯಲ್ಲಿ ಒಂದು ಮಗುವು ಇತ್ತು, ಐದು ಮೀನುಗಾರರಲ್ಲೊಬ್ಬ ಬಂಜೆಯಿದ್ದ, ಪೆಟ್ಟಿಗೆ ತೆರೆದು ನೋಡಲಾಗಿ ಒಂದು ಹೆಣ್ಣು ಮಗು ಇತ್ತು)

ಜನಕ ಮಹಾರಾಜನ ಸಾಮ್ರಾಜ್ಯದ ಮಿಥಿಳೆಯ ಮೀನುಗಾರರು ನದಿಯಲ್ಲಿ ಮೀನು ಹಿಡಿಯಲು ಹೆಣೆದ ಬಲೆಯಲ್ಲಿ ಒಂದು ಪೆಟ್ಟಿಗೆ ಸಿಗುತ್ತದೆ. ಆ ಪೆಟ್ಟಿಗೆಯಲ್ಲಿ ಒಂದು ಹೆಣ್ಣು ಮಗು ಇರುತ್ತದೆ. ಅದನ್ನು ಕಂಡ ಒಬ್ಬ ಮೀನುಗಾರ ತನಗೆ

ಹನ್ನೆರಡು ವರ್ಷಗಳಿಂದ ಮಕ್ಕಳಿಲ್ಲದೆ ಬಂಜೆಯೆಂಬ ಹಣೆಪಟ್ಟಿಯಿಂದ ಸಮಾಜದಲ್ಲಿ ಅವಮಾನಗೊಂಡಿದ್ದೇನೆ, ತನಗೆ ಈ ಮಗು ಬೇಕೆಂದು ಹೇಳಿ ಮನೆಗೆ ಒಯ್ಯುವನು. ಇದರಿಂದ ಅದರಲ್ಲೊಬ್ಬ ಮೀನುಗಾರನಿಗೆ ಅಸೂಯೆಯಾಗಿ ಈ ಸುದ್ದಿಯನ್ನು ಜನಕ ಮಹಾರಾಜನಿಗೆ ತಿಳಿಸುವನು. ವಿಚಾರವನ್ನು ತಿಳಿದ ರಾಜನು ರಾಜಾಜ್ಞೆಯನ್ನು ಹೊರಡಿಸಿ; ಮೀನುಗಾರ ಮತ್ತು ಮಗುವಿರುವ ಪೆಟ್ಟಿಗೆಯನ್ನು ತರಲು ಪ್ರಧಾನಿಯನ್ನು ಕಳುಹಿಸುವನು. ರಾಜಾಜ್ಞೆಯಿಂದ ಭಯಭೀತನಾದ ಆ ಮೀನುಗಾರ ತನಗೆ ಸಿಕ್ಕಿರುವ ಪೆಟ್ಟಿಗೆಯನ್ನು ಮಂತ್ರಿಗೆ ಒಪ್ಪಿಸುವನು.

**ಮಾರೊ ಕೇಣೊಯೆ ರಾಣಿ ಮಾನಲೇಲೊ**
**ಘರೆ ಆವಚ ಛೋರಿನ ಆರತಿ ಝುಲೊ**
**ಓಯಿ ಪಂಜರೇನ ಪರಧಾನ ಲೇನ ಆಯೊ**
**ಪಂಜರೇರ ಪತ್ತೊ ರಾಜಾ ವಾಚರಲೀದೊ**
**ಕೂಣ ವಾಚಚ ಛೋರಿರೊ ಬಾಪ ವಿಯ**
**ಸಾತಿ ಸಾಮಿರ ಬೇಟಿ ಸೀತಾರ ಬಾಪ ವಿಯ**
**ಏಯಿ ಛೋರಿರೊ ನಾಮ ಸೀತಾರ ವಿಯ**

**(ಲಂಬಾಣಿ ರಾಮಾಯಣ, ಪುಟ:93)**

(ಅರ್ಥ: ನನ್ನ ಮುದ್ದಿನ ರಾಣಿಯೇ ಸ್ವೀಕರಿಸು, ಮನೆಗೆ ಆಗಮಿಸುತ್ತಿರುವ ಮಗುವನ್ನು ಗೌರವದಿಂದ ಸ್ವಾಗತಿಸು, ಆ ಪೆಟ್ಟಿಗೆಯನ್ನು ಪ್ರಧಾನಿ ತಂದನು, ಪೆಟ್ಟಿಗೆಯ ಮೇಲಿನ ರಹಸ್ಯವನ್ನು ರಾಜನು ಪತ್ತೆ ಹಚ್ಚಿದ, ಯಾರು ಓದುವವರೋ ಅವರು ಸಾಕು ತಂದೆ, ಏಳು ಋಷಿಗಳು ಮಗು ಸೀತೆಯ ತಂದೆಯರು, ಈ ಮಗುವಿನ ಹೆಸರು ಸೀತೆ ಆಗಿದೆ.)

ಮೀನುಗಾರನಿಗೆ ಸಿಕ್ಕಿದ್ದ ಮಗುವಿನ ಪೆಟ್ಟಿಗೆ ಅರಮನೆಗೆ ಪ್ರವೇಶವಾದಾಗ ರಾಣಿಯರು ಆರತಿ ಎತ್ತಿ ಗೌರವದಿಂದ ಸ್ವಾಗತಿಸಬೇಕೆಂದು ಆಜ್ಞಾಪಿಸಿದನು. ಅಂತೆಯೇ ಅರಮನೆಗೆ ಮಗುವಿರುವ ಪೆಟ್ಟಿಗೆಯ ಪ್ರವೇಶವಾಯಿತು. ಪೆಟ್ಟಿಗೆಯ ಮೇಲಿನ ಬರಹವನ್ನು ರಾಜನು ಓದಿದನು. 'ವಾಚಿಸಿದವನು ಮಗುವಿನ ಸಾಕು ತಂದೆ ಆಗುವನು, ಸಪ್ತಮಹರ್ಷಿಗಳು ಮಗುವಿನ ತಂದೆ' ಎಂದು ಬರೆಯಲಾಗಿತ್ತು. ಸಪ್ತ ಮಹರ್ಷಿಗಳ ಆಶೀರ್ವಚನಗಳಿಂದ ಹುಟ್ಟಿದ ಮಗು ಹೊನ್ನಿನಂತೆ ಹೊಳೆಯುತ್ತ; ಕಾಂತಿಯುಕ್ತವಾಗಿದ್ದಳು. ರೂಪ ಲಾವಣ್ಯದಲ್ಲಿ ಅತೀ ಸುಂದರವಾಗಿದ್ದಳು. ಆ ಮಗುವನ್ನು ಬೆಳ್ಳಿ ಬಂಗಾರದಿಂದ ಮಾಡಿರುವ ತೊಟ್ಟಿಲಲ್ಲಿಟ್ಟು ಪದ್ಧತಿಯಂತೆ ಶಾಸ್ತ್ರೋಕ್ತವಾಗಿ 'ಸೀತೆ' ಎಂದು ನಾಮಕರಣ ಮಾಡಿದರು.

ಜನಕ ಮಹಾರಾಜ ಮತ್ತು ರಾಣಿಯರ ಮಡಿಲಲ್ಲಿ ಸೀತೆ ಸುಖವಾಗಿ ಬೆಳೆದಳು. ಅವರೆಲ್ಲರೂ ಸಂತೋಷದ ಕಡಲಲ್ಲಿ ತೇಲಾಡಿದರು. ಒಂದು ದಿನ ರಾಜನು ಮಗುವಿನಿಂದ ಉಪಲಬ್ಧವಾಗಿರುವ ಸಂತಸವನ್ನು ಚಿರಸ್ಥಾಯಿಯಾಗಿಸಲು ವಾಯುವಿಹಾರಕ್ಕೆ ಹೊರಟನು. ಆಗ ಮಗಳು ಸೀತೆಯು ತಾನು ಮನೆಯಂಗಳದ ಕಸಗೂಡಿಸುವೆನೆಂದು ಕೇಳಿಕೊಳ್ಳುವಳು. ಸೀತೆಯ ಅಭಿಲಾಷೆ ರಾಜನಿಗೆ

ಹಿತವೆನಿಸದಿದ್ದರೂ; ಮಗಳ ಮೇಲಿನ ಪ್ರೀತಿ–ಮಮತೆಗೆ, ಅವಳ ಆಸೆಯನ್ನು ತಿರಸ್ಕರಿಸದೆ ಮಾನ್ಯಮಾಡಿದನು. ಆಗ ಸೀತೆ ಪೊರಕೆ ಹಿಡಿದು ಕಸಗೂಡಿಸುತ್ತಿರುವಾಗ–

**ಭಾಣ್ಣಿ ಝುಲಲೇನ ಸೀತಾ ಜಮಿ ಝಾಡರ**
**ಸಾರಿ ಹವೇಲಿರ ಜಮಿ ಝಾಡತಿರ ಆವ**
**ಜಮಣೆ ಕೋನಾಮ ಧನಕ ಬಾಣರ ವಿಯ**
**ಓ ಬಾಣೇನ ವಸಳೇಮ ಬುರಮೇಲೇರ**
**ಓಯಿ ವಸಲೇಮ ಬಾಣ ಚಳಕಾ ಮಾರರೆ**
**ಓಯಿ ಬಾಣೇನ ದೇಕಲೇನ ಸೀತಾ ಘಬರಾಗಿರ**

**(ಲಂಬಾಣಿ ರಾಮಾಯಣ, ಪುಟ: 100)**

(ಅರ್ಥ: ಪೊರಕೆ ಹಿಡಿದು ಸೀತೆ ಕಸಗೂಡಿಸುವಳು, ಮನೆಯಂಗಳವನ್ನು ಪ್ರೀತಿಯಿಂದ ಗೂಡಿಸುವಳು, ಬಲಭಾಗದಲ್ಲಿ ಧನುಸ್ಸು, ಬಾಣವಿತ್ತು, ಆ ಬಾಣವು ಕಸದಿಂದ ಮುಚ್ಚಿತ್ತು, ಕಸದಲ್ಲಿ ಹುದುಗಿದ್ದ ಬಾಣವು ಹೊಳೆಯುತ್ತಿತ್ತು, ಹೊಳೆಯುತ್ತಿರುವ ಬಾಣವನ್ನು ಸೀತೆ ಕಂಡು ಹೆದರಿದಳು.)

ಸೀತೆಯು ಕಸಗೂಡಿಸುತ್ತಿರುವಾಗ ಮನೆಯ ಅಂಗಳದಲ್ಲಿ ಧನುಸ್ಸು, ಬಾಣವನ್ನು ಕಂಡಳು. ಸೀತೆಯ ಬಲಭಾಗಕ್ಕೆ ಕಂಡಂತಹ ಧನುಸ್ಸು, ಬಾಣವನ್ನು ಕಂಡು ಹೆದರಿದಳು. ಆಶ್ಚರ್ಯದಿಂದ ಅವುಗಳನ್ನು ಬಲಗೈಯಲ್ಲಿ ಎತ್ತಿಕೊಂಡು ಕಸಗೂಡಿಸುತ್ತಿದ್ದ ಸೀತೆಯನ್ನು ಜನಕ ಮಹಾರಾಜ ಕಂಡನು. ಹೊಳೆಯುತ್ತಿರುವ ಶಿವಧನುಸ್ಸು, ಬಾಣ ಸೀತೆಯ ಕೈಯಲ್ಲಿ ಹೇಗೆ ಬಂದಿತು? ಎಂದು ಚಕಿತನಾದನು. ರಾಜನು ಆಶ್ಚರ್ಯಗೊಂಡಿದ್ದರೂ ಶುಭ ಶಕುನವೆಂದು ಯೋಚಿಸಿದ. ಮಗಳ ಕಲ್ಯಾಣ ಕಾರ್ಯದ ಬಗೆಗೆ ಯೋಜಿಸಿದ. ಅಲ್ಲದೆ, ದಿನದಿಂದ ದಿನಕ್ಕೆ ಸೊಂಪಾಗಿ ಬೆಳೆದ ಸೀತೆಗೆ ಮದುವೆ ಮಾಡಿಸಲು ತೀರ್ಮಾನಿಸಿದ. ಸೀತೆಯ ಕಲ್ಯಾಣಕ್ಕೆ ಇದುವೇ ಸೂಕ್ತಸಮಯವೆಂದು ಭಾವಿಸಿ, ಸೀತೆಗೆ ಸರಿಯಾದ ವರನನ್ನು ಹುಡುಕಲು ನಿಶ್ಚಯಿಸಿದನು.

**ಸೀತೆಯ ಸ್ವಯಂವರ (ವಿವಾಹದ ನಿಶ್ಚಿತಾರ್ಥ):**

ಜನಕ ಮಹಾರಾಜ ಸೀತೆಯ ರೂಪ ಲಾವಣ್ಯಕ್ಕೆ ಸರಿಹೊಂದುವಂತಹ ವೀರನೂ, ಶೂರನೂ ಆಗಿರುವ ಹಾಗೂ ಉದಾತ್ತಗುಣ ಸಂಪನ್ನನಾಗಿರುವಂತಹ ವರನನ್ನು ಹುಡುಕಲು ಮಂತ್ರಿಗೆ ಆಜ್ಞೆ ಮಾಡಿದನು. ವರನ ಆಯ್ಕೆಗೆ 'ಸ್ವಯಂವರ'ವನ್ನು ಏರ್ಪಡಿಸುವಂತೆ ತಿಳಿಸಿದನು. ಸ್ವಯಂವರದಲ್ಲಿ ಸೀತೆಗೆ ದೊರೆತಿದ್ದ ಶಿವಧನುಸ್ಸನ್ನು ಯಾರು ಎತ್ತುವರೋ ಅವರು ಸೀತೆಯ ಪತಿಯಾಗುವರು ಎಂದು ಸಂದೇಶ ಹೊರಡಿಸಿದರು. ಸಂದೇಶವನ್ನು ದೇಶ ವಿದೇಶದ ರಾಜ ಮಹಾರಾಜರುಗಳಿಗೆ ಕಳುಹಿಸಿದರು. ಅಂತೆಯೇ ಸೀತೆಯ ಸ್ವಯಂವರದಲ್ಲಿ ಋಷಿಮುನಿ ವಿಶ್ವಾಮಿತ್ರನು ಸಾನಿಧ್ಯವಹಿಸಬೇಕೆಂದು ಜನಕ ಮಹಾರಾಜ ಮುನಿವರ್ಯನಿಗೆ ಆಹ್ವಾನವಿತ್ತನು. ಆಹ್ವಾನ ಸ್ವೀಕರಿಸಿದ ವಿಶ್ವಾಮಿತ್ರನು ರಾಮ ಲಕ್ಷ್ಮಣರನ್ನು ಜೊತೆಯಲ್ಲಿ ಕರೆದುಕೊಂಡು

ಸ್ವಯಂವರಕ್ಕೆ ಆಗಮಿಸಿದರು. ಮುನಿಗಳು ಮಿಥಿಲೆ ನಗರಕ್ಕೆ ಬಂದಿರುವ ಸಂಗತಿ ತಿಳಿದು; ಜನಕ ಮಹಾರಾಜ ತನ್ನ ಪರಿವಾರ ಸಮೇತನಾಗಿ ಅತ್ಯಂತ ಗೌರವ ಆದರಗಳಿಂದ ಋಷಿಮುನಿಯನ್ನು ಬರಮಾಡಿಕೊಂಡನು. ಹಾಗೆಯೇ ರಾಮ ಲಕ್ಷ್ಮಣರ ಪರಿಚಯಿಸಿಕೊಂಡನು.

ಸೀತೆಯ ಸ್ವಯಂವರಕ್ಕೆ ದೇಶ ವಿದೇಶಗಳಿಂದ ರಾಜರು, ರಾಜಕುಮಾರರು ಆಗಮಿಸಿದರು. ಅಂತೆಯೇ ಲಂಕೆಯ ರಾವಣನು ಸ್ವಯಂವರದಲ್ಲಿ ಪಾಲ್ಗೊಳ್ಳಲು ಸಿದ್ಧನಾದನು. ಹೊರಡುವ ಮುಂಚೆ ಮಡದಿ ಮಂಡೋದರಿಯ ಅಪ್ಪಣೆಯನ್ನು ಯಾಚಿಸಿದನು. ಅವಳು ರಾವಣನನ್ನು ತಡೆಯುವಳು. ಹಿತೋಪದೇಶವನ್ನು ಮಾಡುವಳು. ಆದರೆ ಮಡದಿ ಮಂಡೋದರಿಯ ಮಾತನ್ನು ನಿರ್ಲಕ್ಷಿಸಿದನು. ರಾವಣನು ತನಗೆ ಮುಂದೆ ಸಂಭವಿಸಬಹುದಾದ ಅಪಮಾನ, ಅನಾಹುತಗಳನ್ನು ಲೆಕ್ಕಿಸದೇ ಮಿಥಿಳೆ ನಗರಕ್ಕೆ ಧಾವಿಸಿದನು. ಅವನು ಹೊರಡುವಾಗ ಕಾಗೆ, ಬೆಕ್ಕು, ಗೂಬೆಗಳ ದರ್ಶನವಾಗುವುದು. ಜನಪದರಲ್ಲಿ ಇದು ಅಪಶಕುನದ ಸಂಕೇತವೆಂದು ಚಿತ್ರಿತಗೊಂಡಿದೆ. ಇಂಥ ಅಪಶಕುನವನ್ನು ಲಕ್ಷಿಸದೇ, ಹಠವನ್ನು ಬಿಡದೇ, ರಾವಣನು ತನ್ನ ಲಕ್ಷ್ಯವನ್ನು ಸಾಧಿಸಲು ಸೀತಾ ಸ್ವಯಂವರಕ್ಕೆ ಬರುವನು.

ಜನಕ ಮಹಾರಾಜನು ಸ್ವಯಂವರದಲ್ಲಿ ನೆರೆದಿದ್ದ ಸಭಾಸದರ ಮುಂದೆ 'ಶಿವಧನುಸ್ಸು' ಇಟ್ಟನು. ಅಲ್ಲದೇ ಸ್ಪರ್ಧೆಯ ನಿಯಮಗಳನ್ನು ತಿಳಿಸುವಂತೆ ಮಂತ್ರಿಗೆ ಸೂಚಿಸುವನು. ರಾಜಾಜ್ಞೆಯಂತೆ ಪ್ರಧಾನಿಯು–

**ಜನಕರಾಜ ಪರಧಾನೇನ ಕೇರೋ**
**ಧನಕಬಾಣೇನ ಪಾಡಜೇನರ**
**ಅಸೋ ವೇರಾಳುತಿ ಸೀತಾರ ಸಗಾಯಿರ**
**ಪರಧಾನ ಸಭಾಮ ವಿಚಾರ ಕಳಾಯೋರ**

**(ಲಂಬಾಣಿ ರಾಮಾಯಣ. ಪುಟ:110)**

(ಅರ್ಥ: ಜನಕ ರಾಜನು ಪ್ರಧಾನಿಗೆ ಹೇಳಿದ, ಧನುಸ್ಸು ಬಾಣ ಎತ್ತುವವನಿಗೆ, ಅಂಥ ವೀರನೊಂದಿಗೆ ಸೀತೆಯ ನಿಶ್ಚಿತಾರ್ಥ ಎಂದು ಪ್ರಧಾನಿಯು ಸಭೆಗೆ ತಿಳಿಸಿದನು.)

ಸ್ವಯಂವರದಲ್ಲಿ ಶಿವಧನುಸ್ಸು ಮತ್ತು ಬಾಣವನ್ನು ಯಾರು ಎತ್ತುವರೋ ಅವರೊಂದಿಗೆ ಸೀತೆಯ ಮದುವೆ ನಿಶ್ಚಯವಾಗುವುದೆಂದು ಮಂತ್ರಿಯು ಸಭೆಯಲ್ಲಿ ಸಾರಿ ಹೇಳಿದನು. ಅಂತೆಯೇ ಸ್ವಯಂವರ ಆರಂಭಗೊಳ್ಳುವುದು. ಸ್ವಯಂವರಕ್ಕೆಂದು ಬಂದಿದ್ದ ವೀರಾಧಿವೀರರೆಲ್ಲರೂ ಶಿವಧನುಸ್ಸನ್ನು ಎತ್ತಲು ಹರಸಾಹಸ ಪಟ್ಟು ಅವಮಾನಿತರಾದರು. ನಂತರ ರಾವಣನ ಸರದಿಯು ಬಂತು–

**ಬೇಟೋ ಬೇಟೊ ರಾವಣ ಮುಚ್ಚೇಪರ ಹಾತ ಫೇರೊರ**
**ಸಾರಿ ಸಭಾಮ ರಾವಣ ನಜರ ಫಾಲರ**
**ರಾವಣ ಜಾರೊ ಧನಕ ಬಾಣೇಕನರ**
**ವೇಲಾ ವೇಲಾತಿ ಬಾಣೇನ ಉಪರ ಪಾಡನ**

**ಛಾತಿಪರ ಧನಕ ಬಾಣ ಘಾಲಲೇನರ**
**ಢೇರವೇನ ರಾವಣ ಧರತಿಪರ ಪಡನ**
**ಮಂಡೋದರಿರ ಬೋಲ ರಾವಣೇನ ಹರದಾನ.**

**(ಲಂಬಾಣಿ ರಾಮಾಯಣ, ಪುಟ:111)**

(ಅರ್ಥ: ಕುಳಿತಲ್ಲೇ ರಾವಣ ಮೀಸೆಯ ತಿರುವಿದ, ಸಭಾಸದರನ್ನು ರಾವಣ ನಿಗಾವಹಿಸಿ ನೋಡಿದ, ರಾವಣನು ಧನುಸ್ಸು ಬಾಣದ ಸಮೀಪ ಹೋಗುವನು, ಕಷ್ಟಪಟ್ಟು ಧನುಸ್ಸು ಬಾಣವನ್ನು ಮೇಲೆತ್ತಲು ಪ್ರಯತ್ನಿಸಿದ, ಎತ್ತಲಾಗದೆ ಎದೆ ಮೇಲೆ ಧನುಸ್ಸು ಬಾಣ ಬಿದ್ದಿತು, ಸಾಕಾಗಿ ರಾವಣ ಭೂಮಿಗೆ ಕುಸಿದ, ಮಂಡೋದರಿಯ ಮಾತು ರಾವಣನ ಸ್ಮರಣೆಗೆ ಬಂದಿತು.)

ಸ್ವಯಂವರದಲ್ಲಿ ದೇಶ ವಿದೇಶದ ರಾಜರು ಭಾಗವಹಿಸಿ ಬಾಣ, ಧನುಸ್ಸನ್ನು ಎತ್ತಲು ವಿಫಲರಾಗುತ್ತಿದ್ದಂತೆ ರಾವಣನು ಸಭಾಸದರನ್ನು ನೋಡುತ್ತಲೇ ತನ್ನ ಮೀಸೆಯನ್ನು ತಿರುವುತ್ತಿದ್ದನು. ಶಿವಧನುಸ್ಸನ್ನು ತಾನೆತ್ತುವೆನೆಂಬ ಅಹಂಕಾರದಿಂದ ಸ್ವಯಂವರದ ಪಂದ್ಯಕ್ಕೆ ಅಣಿಯಾದನು. ಶಿವಧನುಸ್ಸನ್ನು ಎತ್ತಲು ಶತ ಪ್ರಯತ್ನ ಮಾಡಿದನು. ಆದರೆ, ಶಿವಧನುಸ್ಸನ್ನು ಎತ್ತಲಾಗದೆ ತನ್ನ ಎದೆಯ ಮೇಲೆ ಹಾಕಿಕೊಂಡು ವಿಲವಿಲನೇ ಒದ್ದಾಡಿ ಕುಸಿದು ಧರೆಗೆ ಬಿದ್ದನು. ಈ ದೃಶ್ಯ ನೋಡಿದ ಸಭಾಸದರೆಲ್ಲರೂ ಗೊಳ್ಳೆಂದು ನಕ್ಕರು. ಇದರಿಂದ ಅವಮಾನಿತನಾದ ರಾವಣನು ತನ್ನ ಮಡದಿಯ ಮಾತನ್ನು ನೆನೆದು ಮರುಗಿದನು. (ತನ್ನ ವಿಫಲತೆಗೆ ಸೇಡು ತೀರಿಸಿಕೊಳ್ಳಲು ಹವಣಿಸಿದನು.)

ರಾವಣನ ತರುವಾಯ ರಾಮ ಲಕ್ಷ್ಮಣರ ಸರದಿ ಬಂದಿತು. ಲಕ್ಷ್ಮಣನು ಸ್ವಯಂವರದಲ್ಲಿ ತಾನು ಶಿವಧನುಸ್ಸು ಎತ್ತುವುದಾಗಿ ರಾಮನಲ್ಲಿ ವಿಜ್ಞಾಪಿಸಿದನು. ಆಗ ರಾಮನು ಲಕ್ಷ್ಮಣನಿಗೆ ಹೀಗೆ ನುಡಿದನು:

**ಧನಕ ಬಾಣ ಲಚಮಣ ಕೋನಿ ಉಪಡರ**
**ಬಾರ ವರಸೇರೋ ತಪಸ್ಯಾ ಕರಮಲಣೂರ**
**ಮುಂಡೇಮ ಕೋಡಿಯಾರ ಮಾಳೊ ರೇಣುರ**
**ಹನೂ ತಪಸ್ಯಾ ಕರಮಲಜೇನ ಬಾಣ ಉಪಡರ**
**ಬಾಣ ಪಾಡೇರ ಅಪಣ ಹಾತೇತಿ ವೇನಿರ**

**(ಲಂಬಾಣಿ ರಾಮಾಯಣ, ಪುಟ:114)**

(ಅರ್ಥ: ಲಕ್ಷ್ಮಣ ಧನುಸ್ಸು ಎತ್ತಲಾಗದು, ಹನ್ನೆರಡು ವರುಷದ ತಪಸ್ಸನ್ನಾಚರಿಸಿರಬೇಕು, ಬಾಯಲ್ಲಿ ಜೇಡನ ಬಲೆಯಿರಬೇಕು, ಅಂಥ ತಪಸ್ವಿಗೆ ಬಾಣ ಎತ್ತಲು ಸಾಧ್ಯ, ಬಾಣ ಎತ್ತುವುದು ನಮ್ಮಿಂದ ಆಗದು.)

ಶಿವಧನುಸ್ಸು, ಬಾಣ ಎತ್ತುವವನು ತಪಸ್ವಿಯಾಗಿರಬೇಕು. ಹನ್ನೆರಡು ವರುಷಗಳ ಕಠಿಣ ವ್ರತಾಧಾರಿಯಾಗಿರಬೇಕು, ಅಂದಾಗ ಸುಲಭವಾಗಿ ಧನುಸ್ಸು ಬಾಣವನ್ನು ಎತ್ತಿಕೊಳ್ಳುವನು. ಆದರೆ ನಾವು ತಪಸ್ವಿಗಳಲ್ಲ. ಆದ್ದರಿಂದ ಧನುಸ್ಸು ಬಾಣವು ನಮ್ಮಿಂದ ಎತ್ತಲಾಗದು. ವ್ಯರ್ಥ ಪ್ರಯತ್ನ ಬೇಡವೆಂದು ರಾಮನು ಲಕ್ಷ್ಮಣನನ್ನು

ತಡೆದು; ಅಂಥ ತಪಸ್ವಿ ಯಾರಿದ್ದಾರೆ? ಎಂದು ಕೇಳುವನು. ಪ್ರತಿಯಾಗಿ ಲಕ್ಷ್ಮಣನು ತಾನು ತಪಸ್ವಿಯೆಂದೂ, ಹನ್ನೆರಡು ವರುಷಗಳ ಕಠಿಣ ವ್ರತಗಳನ್ನಾಚರಿಸಿದವನೆಂದು ತಿಳಿಸುವನು. ಅದು ಹೀಗಿದೆ:

**ಲಚಮಣ ಹತಿಯಾರ ಹಾತೇಮ ಝುಲನ**
**ಹತಿಯಾರೇತಿ ಲಚಮಣ ಜಾಂಗ ಚೀರನರ**
**ಬಾರ ವರಸೇರ ಫಳ ಫೂಲೇರ ರಾಸ ಫಾಲನ**
**ಮುಂಡೋ ಫಾಡನ ಕೋಡಿಯಾರ ಮಾಳೊ ದಕಾಳೋ**

**(ಲಂಬಾಣಿ ರಾಮಾಯಣ, ಪುಟ:115)**

(ಅರ್ಥ: ಲಕ್ಷ್ಮಣ ಖಡ್ಗ ಹಿಡಿದನು, ಖಡ್ಗದಿಂದ ತನ್ನ ತೊಡೆಯನ್ನು ಸೀಳಿದ, ಹನ್ನೆರಡು ವರುಷದ ಹಣ್ಣು ಹೂಗಳ ರಾಶಿ ಹಾಕಿದನು, ಬಾಯಿ ತೆರೆದು ಜೇಡ ಬಲೆಯ ತೋರಿಸಿದನು.)

ಇದನ್ನು ರಾಮನು ನೋಡುತ್ತಲೇ ಆಲೋಚಿಸಿದನು. ಮಹಡಿಯ ಮೇಲೆ ಸೀತೆ ನಿಂತು ನೋಡುತ್ತಿದ್ದಳು. ಲಕ್ಷ್ಮಣನ ತಪಸ್ಸು, ವ್ರತಗಳನ್ನು ಕಂಡು ಧನುಸ್ಸನ್ನು ಎತ್ತಲು ರಾಮ ಆಜ್ಞೆಯಿತ್ತನು. ಆಗ ಲಕ್ಷ್ಮಣನು ಧನುಸ್ಸನ್ನು ಎತ್ತಲು ಸ್ಪರ್ಧೆಗೆ ಇಳಿದನು.

**ರಾಮ ಹುಕಂ ದಿನೊ ಲಚಮಣೇನರ**
**ಧನಕ ಬಾಣೇಕನ ಲಚಮಣ ಚಲೋಜಾರೋರ**
**ನವನ ಬಾಣೇನ ಪಾಡತೊ ಸಲಾಮಿ ವಿಯರ**
**ಘಡಿಭರ ವಿಚಾರ ಕೀದೊ ಮನೇಮರ**
**ಡಾವೆ ಟಾಂಗೇತಿ ಬಾಣೇನ ವಚಕಾಳೋರ**
**ಜಮಣೆ ಹಾತೇತಿ ಧನಕ ಬಾಣೇನ ಪಾಡೋರ**
**ಏಕಿ ಝುಟಕೇಮ ಬಾಣೇನ ಪಾಡಲೀದೋರ**

**(ಲಂಬಾಣಿ ರಾಮಾಯಣ, ಪುಟ:117)**

(ಅರ್ಥ: ರಾಮ ಅನುಮತಿ ಇತ್ತನು ಲಕ್ಷ್ಮಣನಿಗೆ, ಧನುಸ್ಸು ಬಾಣದ ಹತ್ತಿರಕ್ಕೆ ಲಕ್ಷ್ಮಣನು ಬರುವನು, ಬಾಗಿ ಬಾಣವನ್ನೆತ್ತಿದರೆ ಶರಣಾದಂತೆ ಭಾವಿಸಿದ, ಮನದಲ್ಲಿ ಒಂದು ಕ್ಷಣ ಆಲೋಚಿಸಿದನು, ಎಡಗಾಲಿಂದ ಬಾಣವನ್ನು ಮೇಲಕ್ಕೆ ಚಿಮ್ಮಿಸಿದ, ಬಲಗೈಯಿಂದ ಧನುಸ್ಸು ಎತ್ತಿಕೊಂಡನು, ಒಂದೇ ಪ್ರಯತ್ನಕ್ಕೆ ಬಾಣ ಎತ್ತಿಕೊಂಡನು.)

ರಾಮಾಜ್ಞೆಯಿಂದ ಪ್ರೇರಿತನಾದ ಲಕ್ಷ್ಮಣನು ಧನುಸ್ಸನ್ನೆತ್ತಲು ಅಖಾಡಕ್ಕೆ ಬರುವನು. ಬಾಣ ಮತ್ತು ಧನುಸ್ಸನ್ನು ಮನದಲ್ಲಿ ನಮಿಸಿ; ನಡುಬಾಗಿ ಬಾಣವ ಎತ್ತಿದರೆ ಶರಣಾದಂತೆ ಎಂದು ತಿಳಿದು, ಲಕ್ಷ್ಮಣನು ನಡುಬಾಗಿಸದೆ ಎಡಗಾಲಿನಿಂದ ಬಾಣವನ್ನು ಆಕಾಶಕ್ಕೆ ಚಿಮ್ಮಿಸಿದನು. ಬಲಗೈಯಿಂದ ಧನುಸ್ಸನ್ನು ತೆಗೆದುಕೊಂಡನು. ಒಂದೇ ಏಟಿಗೆ ಶಿವಧನುಸ್ಸನ್ನು ಎತ್ತಿಕೊಂಡನು. ಇದನ್ನು ಗಮನಿಸುತ್ತಿದ್ದ ಸೀತೆಯು ಮಹಡಿಯಿಂದಿಳಿದು ಲಕ್ಷ್ಮಣನಿಗೆ ವಿಜಯ ಮಾಲೆಯನ್ನು ತೊಡಿಸಲು ಮುಂದಾದಳು, ಆ ಸಂದರ್ಭದಲ್ಲಿ–

**ಪಾಗಡಿ ಫಾಲೇನ ಸೀತಾ ಲಚಮಣೇಕನ ಜಾರೀರ**

**ಆಂಗೇತಿ ಲಚಮಣ ಮನಮತ ಕೇರೋರ**
**ಮಾರೊ ಭೀಯಾರಜ ಸಗಾಯಿ ವಿಕೊಂತಿಯ**
**ಪಾಗಡಿ ಮಾರೆ ಭೀಯಾನ ಘಾಲ ಕೇರೋರ**
**(ಲಂಬಾಣಿ ರಾಮಾಯಣ. ಪುಟ:117)**

(ಅರ್ಥ: ಪೇಟ ತೊಡಿಸಲು ಸೀತೆ ಲಕ್ಷ್ಮಣನ ಹತ್ತಿರ ಹೋಗುವಳು, ಅದಕ್ಕೆ ಲಕ್ಷ್ಮಣನು ನನಗೆ ತೊಡಿಸಬೇಡೆಂದನು, ನನ್ನ ಅಣ್ಣನ ಮದುವೆ ನಿಶ್ಚಿತಾರ್ಥವಿನ್ನೂ ಆಗಿಲ್ಲ, ಆ ಪೇಟವನ್ನು ನನ್ನ ಅಣ್ಣನಿಗೆ ತೊಡಿಸಬೇಕೆಂದು ಹೇಳುವನು.)

ಸ್ವಯಂವರದಲ್ಲಿ ಲಕ್ಷ್ಮಣನು ಶಿವಧನುಸ್ಸು, ಬಾಣವನ್ನು ತನ್ನದಾಗಿಸಿಕೊಂಡನು. ವಿಜಯಶಾಲಿ ಎಂದೆನಿಸಿಕೊಂಡನು. ಅದಕ್ಕೆ ಸೀತೆಯು ಲಕ್ಷ್ಮಣನನ್ನು ವರಿಸಲು ವಿಜಯದ ಹಾರವನ್ನು, ತಲೆಯ ಮೇಲೆ ಪೇಟ (ಪಾಗಡಿ)ವನ್ನು ಮುಡಿಸಲು ಮುಂದಾಗುವಳು. ಆಗ ಲಕ್ಷ್ಮಣ ಸೀತೆಯನ್ನು ತಡೆದು; ತನ್ನ ಅಣ್ಣನಾದ ರಾಮನಿಗೆ ಇನ್ನು ಮದುವೆ ಆಗಿಲ್ಲ. ಅಣ್ಣನನ್ನು ಬಿಟ್ಟು ನಾನು ಮದುವೆಗೆ ಒಪ್ಪಲಾರೆ, ಈ ವಿಜಯವು ರಾಮನಿಗೆ ಸೇರಿದ್ದು. ನೀವು ರಾಮನಿಗೆ ವಿಜಯದ ಹಾರವನ್ನು, ಪೇಟವನ್ನು ತೊಡಿಸಬೇಕೆಂದು ಸೂಚಿಸಿದನು. ಆಗ ಸೀತೆಯು ರಾಮನಲ್ಲಿ ಬಂದು ಲಕ್ಷ್ಮಣನ ಮಾತಿನಂತೆ ಸೀತೆಯು ರಾಮನಿಗೆ ಮಾಲಾರ್ಪಣೆಗೈದು ಕಿರೀಟಧಾರಣೆ ಮಾಡಿ, ಮದುವೆಯ ವರನೆಂದು ಸ್ವೀಕರಿಸಿದಳು. ಇವರಿಬ್ಬರ ಮದುವೆ ನಿಶ್ಚಿತಾರ್ಥವು ಸಾಂಗವಾಗಿ ನೆರವೇರಿತು. ಇದರಿಂದ ಕುಪಿತಗೊಂಡ ರಾವಣನು ತನ್ನೊಳಗೆ 'ಒಂದಲ್ಲ ಒಂದು ದಿನ ಸೀತೆಯನ್ನು ಲಂಕೆಗೆ ಅಪಹರಿಸಿಕೊಂಡು ಹೋಗುತ್ತೇನೆ. ಅವಳಲ್ಲಿಯೂ ತನ್ನರ್ಧ ಪಾಲು ಇದೆ' ಎಂದುಕೊಳ್ಳುತ್ತ ಲಂಕೆಗೆ ತೆರಳಿದನು. ಇತ್ತ ರಾಮ-ಸೀತೆಯ ವಿವಾಹ ಪೂರ್ವಸಿದ್ಧತೆ ಭರದಿಂದ ಸಾಗಿತು.

**ಸೀತಾರಾಮ ಕಲ್ಯಾಣ:** ರಾಮ ಸೀತೆಯ ಮದುವೆ ನಿಶ್ಚಯದ ಸುದ್ದಿ ಅಯೋಧ್ಯೆ ದಶರಥ ಮಹಾರಾಜನಿಗೆ ಮುಟ್ಟಿತು. ಈ ಸುವಿಚಾರದಿಂದ ದಶರಥ ಮಹಾರಾಜ ಮತ್ತು ಪರಿವಾರದವರು ಸಂತಸಪಟ್ಟರು. ನಂತರ ಎಲ್ಲರೂ ಅಯೋಧ್ಯೆ ನಗರದಿಂದ ಮಿಥಿಲೆ ನಗರಕ್ಕೆ ಮದುವೆ ದಿಬ್ಬಣ ಹೊರಟರು. ಮಿಥಿಲೆ ನಗರಕ್ಕೆ ಆಗಮಿಸಿದ್ದ ನೆಂಟರನ್ನು ಜನಕ ಮಹಾರಾಜನು ಗೌರವದಿಂದ ಸ್ವಾಗತ ಕೋರಿದನು. ಸೀತೆ ರಾಮರ ಮದುವೆಗೆ ಸಕಲ ಸಿದ್ಧತೆ ಮಾಡಿದರು, ಮಿಥಿಲೆಯನ್ನು ಹೂವುಗಳಿಂದ ಅಲಂಕರಿಸಿದರು. ಅರಮನೆಯಲ್ಲಿ ಮದುವೆ ಸಂಭ್ರಮ ಮನೆಮಾಡಿತ್ತು. ಎರಡೂ ಕಡೆಯವರು ಸೀತೆ ರಾಮರ ಮದುವೆ ಶಾಸ್ತ್ರಗಳನ್ನು ನೆರವೇರಿಸಲು ಅಣಿಯಾದರು.

**ರಾಮ ಸೀತಾರೊರೆ ವಾಯಾ ಭಾಂದನರ**
**ಹೂಂಸೇ ಹೂಂಸೇತಿರ ಮಂಡೇಡೊ ಘಾಲನರ**
**ಮಂಡೇಡೆರಮಾಯಿ ಆಂಕವಾ ಭಾಂದನರ**
**ಕಮ್ಮಾರೇಕನೇತಿ ಹಾಂಡಿ ಕುಳ್ಡಿ ಮಂಗಾನರ**
**ಮಂಡೇಡೆಮಾಯಿ ಮುಸಳೊ ಗಾಡನರ**
**ವೇತಡು ನವಲೇರಿನ ಮೆಂದಿ ಘಸನರ**
**ರಾಮ ಸೀತಾನ ಹಳದಿ ಲಗಾನರ**

**ವೇತಡು ನವಲೇರಿ ಸಾತ ಫೇರಾ ಫರನರ**
**ರಾಮ ಸೀತಾರ ಹಾತೇನ ಮೆಂಡಳ ಭಾಂದನರ**
**(ಲಂಬಾಣಿ ರಾಮಾಯಣ, ಪುಟ:123)**

(ಅರ್ಥ: ರಾಮ ಸೀತೆಯ ಮದುವೆ ಕಟ್ಟಿದರು, ಖುಷಿ ಖುಷಿಯಾಗಿ ಮದುವೆ ಹಂದರ ಹಾಕಿದರು, ಹಂದರದೊಳಗೆ ಎಕ್ಕೆಗಿಡದ ಟೊಂಗೆ ಕಟ್ಟಿ, ಕುಂಬಾರರ ಮನೆಯಿಂದ ಮಡಿಕೆ ಕುಡಿಕೆ ತರಿಸಿ, ಮಂಟಪದೊಳಗೆ ಒನಕೆಯ ನೆಟ್ಟು, ವಧು ವರರಿಗೆ ಮೆಹಂದಿ ಹಚ್ಚಿ, ವಧು ವರರಿಗೆ ಅರಿಶಿಣ ಹಚ್ಚಿ, ವಧು ವರರು ಸಪ್ತಪದಿ ತುಳಿದರು, ರಾಮ ಸೀತೆಯ ಕೈಗೆ ಕಾರಿಕಾಯಿ ಕಟ್ಟಿದರು.)

ರಾಮ ಸೀತೆಯರ ಮದುವೆಯನ್ನು ತುಂಬಾ ಖುಷಿಯಿಂದ ಸಿದ್ಧಗೊಳಿಸಿದರು. ಮದುವೆ ಮಂಟಪ, ಚಪ್ಪರವನ್ನು ಹಾಕಿದರು, ಚಪ್ಪರದ ಕೆಳಗೆ ಎಕ್ಕೆಗಿಡದ ಟೊಂಗೆಯನ್ನು ಕಟ್ಟಿದರು, ಕುಂಬಾರರ ಮನೆಯಿಂದ ಮಡಿಕೆ ಕುಡಿಕೆಗಳನ್ನು ತರಿಸಿ ಇರಿಸಿದರು. ಮದುವೆ ಚಪ್ಪರದ ಮಧ್ಯೆ ಬಾರೆಗಿಡದ ಒನಕೆಯನ್ನು ನೆಟ್ಟಿದರು. ವಧು–ವರರನ್ನು (ಸೀತೆ–ರಾಮ) ಕರೆದು ಮದುವೆ ಚಪ್ಪರದ ಕೆಳಗೆ ಕೂಡಿಸಿದರು. ವಧು ವರರಿಗೆ ಮೆಹಂದಿ, ಅರಿಶಿಣದ ಶಾಸ್ತ್ರವನ್ನು ನೆರವೇರಿಸಿದರು. ಸಪ್ತಪದಿ ತುಳಿಸಿದರು. ಎಲ್ಲಾ ಮದುವೆ ಶಾಸ್ತ್ರಗಳನ್ನು ಪೂರೈಸಿದ ಮೇಲೆ–

**ವೇತಡು ನವಲೇರಿನ ಅಂಗೊಳಿ ಕರಾನರ**
**ರಾಮೇನ ಜಾಂಗಿಯಾ ಝಿಗಲಾ ಪೇರಾನರ**
**ಹಾತೇಮ ಕಠಾರಿ ದೇನ ಮೊಳಿಯಾ ಘಾಲೇಚರ**
**ಸೀತಾನ ಫೇಟಿಯಾ ಕಾಂಚಳಿ ಪೇರಾನರ**
**ಮಾತೇಪರ ಸೀತಾನ ಛಾಂಟಿಯಾ ವೊಡಾನರ**
**ವೇತಡು ನವಲೇರಿನ ಗೇಣೊ ಗಾಂಟೊ ಘಾಲನರ**
**ಲೋಕೂನ ಚುರಮೊ ಲಾಪಸಿರೊ ಖಾಣೊ ಘಾಲನರ**
**(ಲಂಬಾಣಿ ರಾಮಾಯಣ, ಪುಟ:124)**

(ಅರ್ಥ: ವಧು ವರರಿಗೆ ಜಳಕ ಮಾಡಿಸಿದರು. ರಾಮನಿಗೆ ಅಂಗಿ ನಿಕ್ಕರ್ ಉಡಿಸಿ, ಕೈಯಲ್ಲಿ ಆಯುಧ ಹಿಡಿಸಿದರು. ಸೀತೆಗೆ ಲಂಗ ಕುಪ್ಪಸ ಉಡಿಸಿ, ತಲೆಯ ಮೇಲೆ ದಾವಣಿಯ ಸೆರಗಿನಿಂದ ಮುಸುಕು ಧರಿಸಿದಳು, ವಧು ವರರಿಗೆ ಆಭರಣಗಳನ್ನು ತೊಡಿಸಿದರು, ಮದುವೆಗೆ ಬಂದಂತಹ ಜನರಿಗೆ ಸಜ್ಜಕ ಮತ್ತು ಗೋಧಿ ಹುಗ್ಗಿ ಊಟ ಬಡಿಸಿದರು.)

ವಧುವರರಿಗೆ ಶಾಸ್ತ್ರೋಕ್ತವಾಗಿ ಮದುವೆ ಕಾರ್ಯಗಳನ್ನೆಲ್ಲ ಮುಗಿಸಿ; ಸ್ನಾನ ಮಾಡಿಸಿದರು. ಒಡವೆ ವಸ್ತ್ರಾದಿಗಳಿಂದ ಅಲಂಕರಿಸಿದರು. ಮದುವೆಗೆ ಬಂದವರಿಗೆಲ್ಲ ಸಿಹಿ ಊಟ ಬಡಿಸಿದರು. ಹೀಗೆ ಲಂಬಾಣಿಗರು ತಮ್ಮ ಮದುವೆ ಶಾಸ್ತ್ರಗಳಲ್ಲಿ ಅನುಸರಿಸುವ ಎಲ್ಲಾ ಪದ್ಧತಿಗಳನ್ನು ರಾಮ ಸೀತೆಯರ ಮದುವೆಗಳಲ್ಲಿ ಅನ್ವಯಿಸಿಕೊಂಡು ಅದ್ದೂರಿಯಾಗಿ ಮದುವೆ ಮಾಡಿಸಿದರು.

**ಮದುವೆ ದಿಬ್ಬಣ:**

ಮದುವೆ ಮಾಡಿಸಿದ ನಂತರ ಮಿಥಿಳೆ ನಗರದಿಂದ ಅಯೋಧ್ಯೆ ನಗರಕ್ಕೆ ರಾಮ ಸೀತೆಯ ಮದುವೆ ದಿಬ್ಬಣ ಹೊರಟಿತು.

**ಮಿಥಿಲಾ ಗಡೇತಿ ತಾಂಗಡಿ ವಳಾನರ**
**ತಾಂಗಡಿ ಜಾರಿ ಅಯೋಧ್ಯಾಗಡೇನರ**
**ರಾಮ ಸೀತಾರೊರೆ ಜೋಡಾ ಜಮನರ**
**ಗಡೇರ ಲೋಕ ಆಂಗ ಆಂಗ ಜಾರೇರ**
**ವನೂರ ಲಾರ ರಾಮ ಲಚಮಣ ಜಾರೇರ**
**ಲಾರ ಲಾರ ಸೀತಾ ಚಲಿ ಜಾರೀರ**
**ಧೀರೆ ಧೀರೇತಿ ತಾಂಗಡಿ ಚಲಿಜಾರೀರ**

**(ಲಂಬಾಣಿ ರಾಮಾಯಣ, ಪುಟ:127)**

(ಅರ್ಥ: ಮಿಥಿಲಾ ನಗರದಿಂದ ಮದುವೆ ದಿಬ್ಬಣ ಹೊರಟಿತು, ದಿಬ್ಬಣವು ಹೊರಟಿತು ಅಯೋಧ್ಯಾ ನಗರಕ್ಕೆ, ರಾಮ ಸೀತೆಯ ಜೋಡಿ ಸುಂದರವಾಗಿತ್ತು, ನಗರದ ಜನರು ಮುಂದೆ ಮುಂದೆ ಹೋದರು, ಅವರ ಹಿಂದೆ ರಾಮ ಲಕ್ಷ್ಮಣರು ಹೊರಟರು, ಹಿಂದೆ ಹಿಂದೆ ಸೀತೆಯು ಹೊರಟಳು, ಮದುವೆ ದಿಬ್ಬಣವು ಮೆಲ್ಲಮೆಲ್ಲನೆ ಚಲಿಸುತ್ತಿತ್ತು.)

ಸೀತಾರಾಮರ ಮದುವೆ ಶಾಸ್ತ್ರೋಕ್ತವಾಗಿ ಜರುಗಿತು. ಮದುವೆ ನಂತರ ಮಿಥಿಲೆಯಿಂದ ಅಯೋಧ್ಯಾ ನಗರಕ್ಕೆ ಮಧುಮಕ್ಕಳು ತೆರಳಬೇಕಾಯಿತು. ಸೀತೆ ತನ್ನ ಹೆತ್ತವರನ್ನು, ಸಾಕಿದವರನ್ನು ನಮಸ್ಕರಿಸಿ ಮಿಥಿಲೆಯಿಂದ ಹೊರಟಳು. ಮಿಥಿಲೆಯ ಮಹಾರಾಜ ಮತ್ತು ಪರಿವಾರವು ರಾಮ ಸೀತೆಯರ ಮದುವೆ ದಿಬ್ಬಣಕ್ಕೆ ಚಾಲನೆ ನೀಡಿದರು. ಅಯೋಧ್ಯೆ ನಗರದ ಪರಿವಾರವು ಮುಂದೆ ಮುಂದೆ, ರಾಮ ಲಕ್ಷ್ಮಣ ಮತ್ತು ಸೀತೆ ಮಿಥಿಲೆಯ ತೊರೆದು ದಿಬ್ಬಣದ ಭಾಗವಾದರು. ಹೀಗೆ ಮದುವೆ ದಿಬ್ಬಣವು ಮೆಲ್ಲಮೆಲ್ಲನೆ ಸಾಗುತ್ತ ಅಯೋಧ್ಯಾ ನಗರಕ್ಕೆ ಆಗಮಿಸಿತು.

**ತಾಂಗಡಿ ಆರಿಜೇನ ಕೈಕಾರಾಣಿ ದಿಟಿರ**
**ವೋಯಿ ವಸಲಿರಪರ ಚಾವಳ ಮೇಲಿರ**
**ಸೋನೆ ರೂಪೇರ ಆರತಿ ಹಾತೇಮ ಝುಲನರ**
**ದೋಯಿ ಹಾತೇತಿ ಆರತಿ ವತಾರಿರ**
**ಚಾವಳೇರ ಸೇರೇನ ಸೀತಾ ಜಮಣ ಪಗೇತಿ ಢಳಕಾಯಿರ**
**ವೇತಡು ನವಲೇರಿ ಘರೇಮ ಪಗ ಮೇಲನರ**

**(ಲಂಬಾಣಿ ರಾಮಾಯಣ, ಪುಟ:128)**

(ಅರ್ಥ: ಮದುವೆ ದಿಬ್ಬಣದ ಆಗಮನವನ್ನು ಕೈಕೆ ರಾಣಿಯು ಕಂಡಳು, ಮನೆಯ ಹೊಸ್ತಿಲಿನ ಮೇಲೆ ಸೇರು ಅಕ್ಕಿ ಇಟ್ಟಳು, ಬಂಗಾರ ಬೆಳ್ಳಿಯ ಆರತಿಯ ತಟ್ಟೆ ಕೈಯಲಿ ಹಿಡಿದು, ಎರಡು ಕೈಯಿಂದ ಆರತಿ ಎತ್ತಿದಳು, ಅಕ್ಕಿಯ ಸೇರನ್ನು ಸೀತೆ ಬಲಪಾದದಿಂದ ತಳ್ಳಿ, ವಧು ವರರು ಮನೆಯ ಪ್ರವೇಶ ಮಾಡಿದರು.)

ರಾಮ ಸೀತೆಯ ಮದುವೆ ದಿಬ್ಬಣವು ಅಯೋಧ್ಯಾ ನಗರ ಪ್ರವೇಶಿಸಿತು.

ಅರಮನೆಯ ಉಪ್ಪರಿಗೆಯಲ್ಲಿದ್ದ ರಾಣಿ ಕೈಕೆಯು ಮದುವೆ ದಿಬ್ಬಣಕ್ಕೆ ಆರತಿ ಮಾಡಿ ಸ್ವಾಗತಿಸಿದಳು. ಅರಮನೆಯ ಹೊಸ್ತಿಲಿಗೆ ಪೂಜೆ ನೆರವೇರಿಸಿ ಬಂಗಾರದ ಬಳ್ಳದಲ್ಲಿ (ಸೇರು) ಅಕ್ಕಿ ತುಂಬಿಟ್ಟಳು, ಅದನ್ನು ಸೀತೆಯು ತನ್ನ ಬಲಗಾಲಿನಿಂದ ತಳ್ಳಿ ಮನೆಗೆ ಪ್ರವೇಶಿಸಿದಳು. ಹೀಗೆ ರಾಮ ಲಕ್ಷ್ಮಣ ಸೀತೆ ಹಾಗೂ ಸಮಸ್ತ ಪರಿವಾರದವರು ಅಯೋಧ್ಯೆಯಲ್ಲಿ ಸಂತೋಷದಿಂದ ಕಾಲಕಳೆದರು.

ಜನಪದರು ಮಾರ್ಗಕವಿ ಹಾಗೂ ಮೀಮಾಂಸಕರಂತೆ ಕಾವ್ಯ ಕಟ್ಟದಿದ್ದರೂ, ಆಶುಕವಿಗಳಂತೆ ರಸವತ್ತಾದ ಕಥಾವಸ್ತುವನ್ನು ಹೆಣೆದಿರುವುದು ವಿಶೇಷವಾಗಿದೆ. ಇದು ಯಾವ ಕವಿಚಕ್ರವರ್ತಿಗೂ ನಿಲುಕದ ನಿಲವು. ಜನಪದರ ಕಾವ್ಯಗಳಲ್ಲಿ ಛಂದಸ್ಸು, ಅಲಂಕಾರ, ಚಂಪೂವಿನ ವೈಶಿಷ್ಟ್ಯತೆಗಳು ಕಾಣದಿದ್ದರೂ, ದೇಶೀಯತೆ ಎದ್ದುಕಾಣುತ್ತದೆ. ದೇಶೀಯತೆಯಿಂದ ಮಾರ್ಗಕಾವ್ಯಗಳು ಪ್ರೇರಣೆಗೊಂಡಿವೆ. ಜನಪದರು ತಾವು ಆಯ್ದುಕೊಂಡ ಕಥೆಯ ಅಂದಗೆಡದಂತೆ ತಮ್ಮದೇ ಧಾಟಿಯಲ್ಲಿ ವರ್ಣಿಸಿರುವುದು ಅವರಲ್ಲಿನ ಕಲಾವಂತಿಕೆಗೆ ಹಿರಿದಾದ ಗೌರವ ಸಿಕ್ಕಂತೆಯೇ. ಜನಪದದಿಂದ ಶಿಷ್ಟವೇ ಹೊರತು ಶಿಷ್ಟದಿಂದ ಜನಪದವಲ್ಲ ಎಂಬುದು ಲೋಕಸತ್ಯ. ಆದ್ದರಿಂದ ಶಿಷ್ಟಸಾಹಿತ್ಯಕ್ಕೆ ಜನಪದ ಸಾಹಿತ್ಯವೇ ಪ್ರೇರಕ ಮತ್ತು ಜೀವಾಳ. ಮೊದಲು ಪುರಾಣದ ಕಥಾವಸ್ತುಗಳು ಜನಪದರಲ್ಲಿಯೇ ಜನ್ಮಪಡೆದದ್ದು. ಹಾಗಾಗಿ ಜನಪದರು ಕಂಡಂತಹ ರಾಮಾಯಣದ ಪಾತ್ರಗಳು ವಿಶೇಷವಾಗಿಯೇ ಕಾಣಿಸಿಕೊಳ್ಳುತ್ತವೆ.

ಲಂಬಾಣಿ ರಾಮಾಯಣವು ಕೆಲವೊಂದು ಮಾರ್ಪಾಟುಗಳನ್ನು ಮಾಡಿಕೊಂಡು ರಚನೆಯಾದ ಮೌಖಿಕ ಕಥೆಯನ್ನೊಳಗೊಂಡ ಕೃತಿ. ವಾಲ್ಮೀಕಿ ರಾಮಾಯಣದ ಕಥೋದ್ದೇಶವು ಇಲ್ಲಿಯೂ ಸಮ್ಮಿಳಿತವಾಗಿದೆ. ಆದರೆ ನಿರೂಪಣಾ ಶೈಲಿಯಲ್ಲಿ ಭಿನ್ನತೆಯಿದೆ. ಸೀತೆಯ ಸ್ವಯಂವರದ ವರ್ಣನೆ ಮೂಲ ರಾಮಾಯಣಕ್ಕಿಂತಲೂ ವಿಶಿಷ್ಟವಾಗಿ ಕಾಣುತ್ತದೆ. ಸ್ವಯಂವರದಲ್ಲಿ ಭಾಗವಹಿಸುವ ರಾವಣನು ಅವಮಾನಿತನಾಗಿ ಸೀತೆಯ ಅಪಹರಣಕ್ಕೆ ಕಾರಣವಾಗುವುದೆಂದು ಇಲ್ಲಿ ನಿರೂಪಿಸಲಾಗಿದೆ. ಮೂಲ ರಾಮಾಯಣದ ರಾವಣನ ವ್ಯಕ್ತಿತ್ವಕ್ಕೂ, ಜನಪದರ ರಾವಣನಿಗೂ ವ್ಯತ್ಯಾಸಗಳಿವೆ. ನಾಗಚಂದ್ರನ ರಾವಣ ಉದಾತ್ತ ಗುಣದವನೆಂದೂ ವರ್ಣಿತವಾಗಿದೆ. ಹೀಗೆ ಪುರಾಣಕ್ಕೂ, ಮೂಲ ರಾಮಾಯಣ ಹಾಗೂ ಜನಪದ ರಾಮಾಯಣಗಳಲ್ಲಿ ಕಂಡುಕೊಂಡಿರುವ ಪಾತ್ರಗಳ ವ್ಯಕ್ತಿತ್ವ ಚಿತ್ರಣವು ರಚನಾಕಾರರ ದೃಷ್ಟಿಗೆ ಹೊಸದಾಗಿ ಗೋಚರಿಸಿವೆ. ಹಾಗಾಗಿ ಜನಪದರಲ್ಲಿ ತಮ್ಮ ಮನೋರಂಜನಾ ಮಾಧ್ಯಮವನ್ನಾಗಿಸಿಕೊಂಡಿದ್ದ ಕಥನ ಪದ್ಧತಿಯು ಸಹೃದಯರಿಗೆ ವಿಶಿಷ್ಟವಾಗಿ ರಂಜಿಸುತ್ತವೆ.

## ಪರಾಮರ್ಶನ ಗ್ರಂಥಗಳು:


1. ನಾಯಕ ಡಿ.ಬಿ. & ಹರಿಲಾಲ ಪವಾರ (ಸಂ), (2020), ಲಂಬಾಣಿ ರಾಮಾಯಣ, ಹಾವೇರಿ: ಕರ್ನಾಟಕ ಜಾನಪದ ವಿಶ್ವವಿದ್ಯಾಲಯ.
2. ನಾಯಕ ಡಿ.ಬಿ. (ಸಂ), (2021), ಲಂಬಾಣಿ ಸಾಂಸ್ಕೃತಿಕ ಪದಕೋಶ: ಸಂಪುಟ–17, ಗೊಟಗುಡಿ: ಕರ್ನಾಟಕ ಜಾನಪದ ವಿಶ್ವವಿದ್ಯಾಲಯ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.